ಎಲ್ ಎ ಸಿ ನಂಃ 01/2018

ಪಿಡಬ್ಲ್ಯೂ.1 (ಮಲ್ಲಪ್ಪ)

ದಿನಾಂಕ:12-03-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಮಾನ್ಯ ಎ ಜಿ ಪಿ ರವರಿಂದಃ**

ನಾನು ಹಾಜರಿಸಿದ ನಿಪಿ 4 ರಲ್ಲಿರುವ ಮಾಹಿತಿ ಸರಿ ಇದೆ. ನಾನು 2008-09 ರ ಹಿಂದಿನ ಮತ್ತು ಆ ಸಾಲಿನ ಉತಾರಗಳನ್ನು ಹಾಜರಿಸಿಲ್ಲ ಎಂದರೆ ತಾಂತ್ರಿಕ ಕಾರಣದಿಂದ ಸಿಕ್ಕಿಲ್ಲ ಹಾಜರಿಸಿಲ್ಲ. ನಾನು ಆ ಸಾಲಿನ ಉತಾರಗಳನ್ನು ಪರೀಶೀಲಸಿದ್ದೇನೆ. ಪ್ರತಿ ವರ್ಷ ನಮ್ಮ ಜಮೀನಿನಲ್ಲಿ ಬೆಳೆದ ಬೆಳೆಯನ್ನು ಪರೀಶೀಲಿಸಿ ಗ್ರಾಮ ಲೆಕ್ಕಾಧಿಕಾರಿಯು ಬೆಳೆಯ ವಿವರ ಪಹಣಿಯಲ್ಲಿ ಬರೆದುಕೊಂಡು ಹೋಗುತ್ತಾರೆ ಎಂದರೆ ನಿಜ.

2. ಕರ್ನಾಟಕ ರಾಜ್ಯ ಪತ್ರದಲ್ಲಿ 14-05-2009 ರಂದು ಹಾಗೂ ದಿನ ಪತ್ರಿಕೆ ಹಸಿರು ಕ್ರಾಂತಿಯಲ್ಲಿ 2010 ರಲ್ಲಿ ಭೂಸ್ವಾಧೀನ ಪಡಿಸಿಕೊಳ್ಳುವ ಪ್ರಕಟಣೆಯಲ್ಲಿ ಸರಕಾರದವರು ಹೊರಡಿಸಿದ್ದರು ಎಂದರೆ ನಿಜ. ದಿನಾಂಕಃ 26-06-2010 ರಂದು ಗ್ರಾಮ ಚಾವಡಿಯಲ್ಲಿ ನೋಟಿಸ್ ಹೊರಡಿಸಿ ಬಿತ್ತರಿಸಿದ್ದರು ಎಂದರೆ ನಿಜ. ಸರ್ವೆ 75/2, 52/2, 57/2 ಎ ಮತ್ತು 16/14 ಜಮೀನುಗಳು ವಶಪಡಿಸಿಕೊಂಡ ನನ್ನ ಜಮೀನಿನ ಅಕ್ಕಪಕ್ಕದಲ್ಲಿವೆ ಎಂದರೆ ನಿಜ.

3. 2009 ಮತ್ತು ಅದರ ಪೂರ್ವ ಪ್ರತಿ ಒಂದು ಎಕರೆಗೆ ನಮ್ಮ ಗ್ರಾಮದ ಜಮೀನುಗಳು ರೂ.60,456/- ಬೆಲೆ ಬಾಳುತ್ತಿದ್ದವು ಎಂದರೆ ಸುಳ್ಳು. ಅಷ್ಟು ಮೊತ್ತಕ್ಕೆ ಮಾರಾಟವಾಗಿದ್ದವು ಎಂದು ತೋರಿಸಲು ನಾನು ನಿಪಿ 4 ಹಾಜರಿಸಿದ್ದೇನೆಂದರೆ ಸುಳ್ಳು. ನಾನು ಹೇಳುವ ಬೆಲೆಗೆ ಜಮೀನುಗಳು ಮಾರಾಟ ಆಗಿದ್ದವು ಎಂದು ತೋರಿಸಲು 2009 ರಲ್ಲಿ ಮತ್ತು ಅದಕ್ಕಿಂತ 2-3 ವರ್ಷಗಳ ಹಿಂದಿನ ಕ್ರಯ ಪತ್ರಗಳನ್ನು ಹಾಜರಿಸಿಲ್ಲ

4. ನನ್ನ ಜಮೀನಿನಲ್ಲಿದ್ದ ಬೊರವೆಲ್, ಕಟ್ಟಡ , ಮತ್ತು ಗಿಡ ಮರಗಳ ಮೌಲ್ಯಮಾಪನ ನಿಪಿ 4 ರಲ್ಲಿ ಸರಿಯಾಗಿ ನಮೂದಿಸಿದ್ದಾರೆ ಎಂದರೆ ಸುಳ್ಳು. ಸದರಿ ಮೌಲ್ಯಮಾಪನ

ಸಂಬಂಧಪಟ್ಟ ಅಧಿಕಾರಿ ಕೊಟ್ಟ ವರದಿ ಮೇಲೆ ನಮೂದಿಸಿದ್ದಾರೆ ಎಂದರೆ ಸುಳ್ಳು. ಸಂಬಂಧಪಟ್ಟ ಅಧಿಕಾರಿಯಿಂದ ಬೋರವೆಲ್ಲಿನ ಮೌಲ್ಯಮಾಪನ ನಿಪಿ 4 ರಲ್ಲಿ ನಮೂದಿಸಿದ ಮೌಲ್ಯಮಾಪನಕ್ಕಿಂತ ಹೆಚ್ಚು ಆಗುತ್ತಿತ್ತು ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ಆ ಕುರಿತು ಅರ್ಜಿ ಕೊಟ್ಟಿದ್ದು ದಾಖಲೆ ಸಿಕ್ಕಿಲ್ಲ ಎಂದು ಹೇಳುತ್ತೇನೆ. ನಿಪಿ 4 ಮತ್ತು 8 ರಲ್ಲಿರುವ ಬೊರವೆಲ್ಲಗಳ AMI ನಂಬರ ಬೇರೆ ಬೇರೆ ಇವೆ ಎಂದರೆ ನಿಜ. ಮೇಲೆ ಹೇಳಿದ ಜಮೀನುಗಳ ಮತ್ತು ವಶಪಡಿಸಿಕೊಂಡ ನನ್ನ ಜಮೀನಿನ ಮಣ್ಣಿನ ಗುಣ ಮತ್ತು ಫಲವತ್ತತೆ ಒಂದೇ ತರಹ ಇದೆ ಎಂದರೆ ಸುಳ್ಳು. ಅದಕ್ಕೆ ನಾನು ಯಾವುದೇ ದಾಖಲೆ ಸಲ್ಲಿಸಿಲ್ಲ.

5. ನನ್ನ ಜಮೀನು ಘಟಪ್ರಭ ನದಿ ದಡಕ್ಕೆ ಬರುತ್ತದೆ ಎಂದು ತೋರಿಸಲು ಗ್ರಾಮ ನಕ್ಷೆ ಹಾಜರಿಸಿಲ್ಲ. ಮಾಳಗಿ ಮನೆಯ ಕಿಮ್ಮತ್ತು ರೂ.10 ಲಕ್ಷ, 2 ಕೊಳವೆ ಬಾವಿಗಳ ಕಿಮ್ಮತ್ತು ರೂ.4 ಲಕ್ಷ, 10 ತೆಂಗಿನ ಗಿಡಗಳಿಂದ ವರ್ಷಕ್ಕೆ ರೂ.1 ಲಕ್ಷ ಆದಾಯ, 5 ಮಾವಿನ ಮರಗಳಿಂದ ರೂ.60 ಸಾವಿರ ವಾರ್ಷಿಕ ಆದಾಯ ಹಾಗೂ 70 ರಿಂದ 80 ಟನ್ ಕಬ್ಬಿನ ಆದಾಯ ಪ್ರತಿ ಎಕರೆಗೆ ರೂ.2 ಲಕ್ಷ, 70 ರಿಂದ 80 ಕ್ವಿಂಟಲ ಬೆಲ್ಲ ರೂ.2,40,000/- ಪ್ರತಿ ಎಕರೆಗೆ ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ಈ ಮೇಲೆ ಹೇಳಿದ ಮರಗಳು ಸ್ವಾಧೀನ ಪಡಿಸಿಕೊಳ್ಳುವ ಸಂದರ್ಭದಲ್ಲಿ ನನ್ನ ಜಮೀನಿನಲ್ಲಿದ್ದವು ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ನನ್ನ ಜಮೀನಿನಲ್ಲಿ ಆಗ ಜಾಲಿ ಮರ, ಸಾಗವಾನಿ ಮತ್ತು ಬೇವಿನ ಮರಗಳು ಇದ್ದವು ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ಕಲಂ 4(1) notification ಪ್ರಕಾರ ನನ್ನ ಜಮೀನಿನಲ್ಲಿದ್ದ ವಸ್ತುಗಳ ಕಿಮ್ಮತ್ತು ಮಾಡಿ ನಿಪಿ 4 ರಲ್ಲಿ ಬರೆದಿದ್ದಾರೆಂದರೆ ಸುಳ್ಳು.

6. ವಶಪಡಿಸಿಕೊಂಡ ಜಮೀನಿನಲ್ಲಿ ಬೊರವೆಲ್ಲ ಇದ್ದ ಕಾರಣ ನನ್ನ ಉಳಿದ ಜಮೀನುಗಳಿಗೆ ಆ ಬೊರವೆಲ್ಲನಿಂದ ನೀರು ಸರಬರಾಜು ನಿಂತು ಹೋಗಿದೆ ಎಂದು ಸಂಬಂಧಪಟ್ಟ ಅಧಿಕಾರಿಯ ಮುಂದೆ ನಾನು ತಕರಾರು ಸಲ್ಲಿಸಿಲ್ಲ ಎಂದರೆ ನಿಜ. ಬೊರವೆಲ್ಲ ಇದ್ದ ಜಮೀನು ವಶಪಡಿಸಿಕೊಂಡ ನಂತರ ಉಳಿದ ನನ್ನ ಜಮೀನು ಮಳೆಯಾಶ್ರಿತ ಜಮೀನುಗಳಾಗಿ ಉಳಿದಿದ್ದವು. ಕಳೆದ 9 ವರ್ಷಗಳಿಂದ ಮಳೆಯಾಶ್ರಿತ ಜಮೀನುಗಳಾಗಿವೆ. ಮಳೆಯಾಶ್ರಿತ ಜಮೀನುಗಳಲ್ಲಿ ಕಬ್ಬು, ಗೋವಿನ ಜೋಳ, ಅರಿಶಿನ

ಬೆಳೆ ಬೆಳೆಯಲು ಬರುವುದಿಲ್ಲ ಎಂದರೆ ನಿಜ. ಕಬ್ಬಿನ ಬೆಳೆ ಬೆಳೆಸಲು ಮಾಡಿದಷ್ಟು ಖರ್ಚು, ಲಾಭ ಬರುತ್ತದೆ ಎಂದರೆ 1 ರೂಪಾಯಿಯಲ್ಲಿ 25 ಭಾಗ ಖರ್ಚು ಮಾಡಿದರೆ 75 ಭಾಗ ಲಾಭವಾಗುತ್ತದೆ. ನನ್ನ ಜಮೀನಿನಲ್ಲಿ ಬಾಳೆಹಣ್ಣು, ಬದನೆಗಿಡ, ಮೆಣಸಿನಕಾಯಿ ಗಿಡ ಮತ್ತು ಈರುಳ್ಳಿ ಬೆಳೆಯುತ್ತಿದ್ದೆ ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ಅದರಿಂದ ರೂ.3 ರಿಂದ 5 ಲಕ್ಷ ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ರಾಮಲಿಂಗೇಶ್ವರ ಯಾತ ನೀರಾವರಿ ಯೋಜನೆಯಡಿಯಲ್ಲಿ ನಿರ್ಮಾಣ ಮಾಡಿದ ಪೈಪ ಲೈನ ಮೇಲೆ ಪರಿಹಾರ ಪಡೆದಿದ್ದೇನೆಂದರೆ ನಿಜ. 2008-09 ರಲ್ಲಿ ನನ್ನ ಜಮೀನಿನ ಕಿಮ್ಮತ್ತು ರೂ.15 ರಿಂದ 20 ಲಕ್ಷ ಮತ್ತು ಈಗ ರೂ.20 ರಿಂದ 25 ಲಕ್ಷ ಆಗುತ್ತದೆ ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ.

7. ನಿಪಿ 7 ನನ್ನ ಹೆಸರಿನಲ್ಲಿ ಇಲ್ಲ ಎಂದರೆ ನನ್ನ ತಂದೆ ಹೆಸರಿಗಿದೆ. ಅದರಲ್ಲಿ ಸರ್ವೆ ನಂಬರ ತಿದ್ದುಪಡಿಯಾಗಿದೆ ಎಂದರೆ ಸುಳ್ಳು. ನಿಪಿ 8 ನ್ನು ಭೂಸ್ವಾಧೀನ ಪಡಿಸಿಕೊಳ್ಳುವಾಗ ಅಧಿಕಾರಿಗಳಿಗೆ ಕೊಟ್ಟಿದ್ದೆ. ನಿಪಿ 9 ರಲ್ಲಿ ಸಾಲು ನಮೂದು ಆಗಿಲ್ಲ ಎಂದರೆ ನಿಜ. ಬೊರವೆಲ್ಲ ಡ್ರಿಲ್ ಮಾಡಿದ ನಂತರ ನೀರು ಬಿದ್ದ ಬಗ್ಗೆ ವರದಿ ಸಲ್ಲಿಸಿಲ್ಲ ಎಂದರೆ ಸುಳ್ಳು. ನಿಪಿ 13 ಕ್ಕೆ ಪಂಚರ ಸಹಿ ಇಲ್ಲ ಎಂದರೆ ನಿಜ. ಕೊಳವೆ ಬಾವಿ ಇದ್ದು ಅದಕ್ಕೆ ವಿದ್ಯುತ ಪೂರೈಸಲು ಅಡ್ಡಿ ಇಲ್ಲ ಎಂದು ಗ್ರಾಮಲೆಕ್ಕಾಧಿಕಾರಿ 2013 ರಲ್ಲಿ ವರದಿ ನೀಡಿದ್ದಾರೆಂದರೆ ನಿಜ. ನಿಪಿ 14 ರಲ್ಲಿ ಸಾಲು ನಮೂದು ಇಲ್ಲ ಎಂದರೆ ನಿಜ. ಸ್ವಾಧೀನ ಪಡಿಸಿಕೊಂಡ ಜಮೀನು ಹೊರತು ಪಡೆಸಿ ನಮ್ಮ ಕುಟುಂಬಕ್ಕೆ ಬೇರೆ ಜಮೀನು ಇಲ್ಲ. ನಿಪಿ 15 ರಿಂದ 19 ದಾಖಲೆಗಳಲ್ಲಿ ವಶಪಡಿಸಿಕೊಂಡ ಜಮೀನಿನ ಸರ್ವೆ ನಂಬರ ಇಲ್ಲ ಎಂದರೆ ಸುಳ್ಳು. ಗೋದಾವರಿ ಶುಗರ ಮಿಲ್ಸ ಲಿಮಿಟೆಡ ಮತ್ತು ಗೋದಾವರಿ ಬಯೋ ರಿಫಾಯನರಿ ಲಿಮಿಟೆಡನ 2009 ರ ದಾಖಲೆ ಹಾಜರಿಸಿಲ್ಲ ಎಂದರೆ ಸುಳ್ಳು. ನಿಪಿ 20 ರಿಂದ 23 ವಶಪಡಿಸಿಕೊಂಡ ಜಮೀನಿನ ಸರ್ವೆ ನಂಬರದ ಅಲ್ಲ ಎಂದರೆ ಸುಳ್ಳು.

8. ನನ್ನ ಜಮೀನಿನಲ್ಲಿ ಬೆಳೆದ ಬೆಳೆ ಕೃಷಿ ಉತ್ಪನ್ನ ಮಾರುಕಟ್ಟೆಗೆ ಸಾಗಿಸಿ ಅಲ್ಲಿಂದ ದಾಖಲೆಯನ್ನು ಪಡೆದು ಇಲ್ಲಿ ಹಾಜರಿಸಿಲ್ಲ ಎಂದರೆ ನಿಜ. ನಿಪಿ 25 ರಲ್ಲಿರುವ

ಜಮೀನುಗಳನ್ನು 2006-07 ರಲ್ಲಿ ವಶಪಡಿಸಿಕೊಂಡಿದ್ದರು. ನಿಪಿ 25 ರ ಪ್ರಕರಣದಲ್ಲಿ ನಮ್ಮ ಜಮೀನಿಗೆ ನದಿಯಿಂದ ನೀರು ಪೂರೈಸಲು ಪರವಾನಿಗೆ ಪಡೆದುಕೊಂಡಿದ್ದನ್ನು ಹಾಜರಿಸಿದ್ದೆ ಎಂದರೆ ನಿಜ. ಆ ಪ್ರಕರಣದಲ್ಲಿ ನಮ್ಮ ಜಮೀನಿನ 1997-98 ರಿಂದ 2002 ರವರೆಗಿನ ಉತಾರಗಳನ್ನು ಹಾಜರಿಸಿದ್ದೆ ಎಂದರೆ ನಿಜ. ಆ ಪ್ರಕರಣದಲ್ಲಿ ಕೃಷಿ ಬೆಳೆ ಬೆಳೆಯಲು ಖರ್ಚು ಮತ್ತು ಆದಾಯ ಎಷ್ಟು ಆಗುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಯಿಂದ ದಾಖಲೆ ಪಡೆದು ಹಾಜರಿಸಿದ್ದೆ ಎಂದರೆ ನಿಜ. ಆ ದಾಖಲೆಗಳನ್ನು ಇಲ್ಲಿ ಹಾಜರಿಸಿಲ್ಲ ಎಂದರೆ ನಿಜ. ಸರಕಾರದವರು ನನ್ನ ಜಮೀನಿನ ಮಣ್ಣು ಅದರಲ್ಲಿರುವ ಬೆಳೆ ಮತ್ತೊಂದುಗಳಿಗೆ ಸರಿಯಾದ ಬೆಲೆ ನಿಗದಿ ಪಡಿಸಿ ನಿಪಿ 4 ರಲ್ಲಿ ನಮೂದಿಸಿದ್ದಾರೆಂದರೆ ಸುಳ್ಳು. ಹೆಚ್ಚಿನ ಪರಿಹಾರ ಪಡೆಯಲು ನನ್ನ ಜಮೀನಿನ ಬೆಲೆ ರೂ.20 ರಿಂದ 25 ಲಕ್ಷ ಈಗ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸುಳ್ಳು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿ ಇದೆ

(ಶ್ರೀಮತಿ ವಿಮಲ್ ಆರ್ ನಂದಗಾಂವ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ